# ಬೇಂದ್ರೆ ಅವರ ಬಾಲ್ಯಕಾಂಡ : ಸ್ವ ಪರಗಳ ಶೋಧ

***ರಮೇಶ್ ಸಿ, ಪಿ ಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.**

**ಪ್ರವೇಶ**

ಜನಪದ ಸಾಹಿತ್ಯ ದುಡಿಯುವ ವರ್ಗದ ಸಂಸ್ಕೃತಿಯ ಪ್ರತೀಕ. ಜನಪದ ಸಾಹಿತ್ಯದಲ್ಲಿ ಉದುಗಿದ ನೈತಿಕ ಮೌಲ್ಯಗಳು ಮನುಷ್ಯನ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾದವುಗಳು. ಈ ಜನಪದ ಸಾಹಿತ್ಯ ಜನರ ಬಾಯಿಂದ ಬಾಯಿಗೆ ಉಳಿದುಕೊಂಡು ಬಂದಿದೆ. ಇದು ಓದು ಬರಹ ಬರದವರಿಂದ ಮೌಖಿಕವಾಗಿ ರಚನೆಗೊಂಡ ಸಾಹಿತ್ಯ. ಇದರಲ್ಲಿ ವಿವೇಚಿಸದ ವಿಷಯಗಳೆ ಇಲ್ಲ. ಈ ಸಾಹಿತ್ಯದಲ್ಲಿ ಮನುಷ್ಯನ ಬದುಕಿಗೆ ಸಂಬಂಧಿಸಿದ ಸುಖ–ದುಃಖ, ದುಗುಡ–ದುಮ್ಮಾನ, ನೋವು–ನಿರಾಸೆ ಕಾಯಕ–ನಿಷ್ಟೆ, ನೀತಿ–ನಿಯತ್ತು ಹೀಗೆ ಅನೇಕ ವಿಷಯಗಳನ್ನು ಎದೆಗೆ ನಾಟಿದಂತೆ ನಾಲಿಗೆಯ ಮೂಲಕ ಸಹಜವಾಗಿ ಹರಿಬಿಟ್ಟಿದ್ದಾರೆ. ಅಂತೆಯೆ ಜನಪದ ತ್ರಿಪದಿಗಳಲ್ಲಿ ಕಂಡು ಬರುವ ನೈತಿಕ ಮೌಲ್ಯಗಳ ಕುರಿತು ವಿವೇಚನೆ ಈ ಪ್ರಬಂಧದ ಉದ್ದೇಶವಾಗಿದೆ. ಬೇಂದ್ರೆಯವರ ಬಾಲ್ಯಕಾಂಡ ಅವರ 'ಸಖಿಗೀತ'ದ ಜೊತೆಯ ಕಾವ್ಯ. ವಸ್ತುವಿನ ದೃಷ್ಟಿಯಿಂದಲ್ಲದೆ ಆಶಯ ಆಕೃತಿಗಳ ದೃಷ್ಟಿಯಿಂದಲು ಎರಡರಲ್ಲಿ ಸಾತತ್ಯ ಸಂಬಂಧವಿದೆ. ಎರಡರ ವಸ್ತು ಬೇಂದ್ರೆಯವರ ಆತ್ಮವೃತ್ತಾಂತ. ಹೀಗಾಗಿ ಈ ಕಾವ್ಯಗಳಿಗೆ ಕಾವ್ಯನಾಯಕರು ಅವರೆ. ವ್ಯತ್ಯಾಸವೆಂದರೆ 'ಸಖಿಗೀತ'ದಲ್ಲಿ ಕವಿ ಬಾಳಿನ ಗಂಟು ನಂಟುಗಳು ಕವಿ ಪತ್ನಿಯೊಂದಿಗೆ ಬೆಸೆದುಕೊಂಡು ಬಂದಿರುವುದರಿಂದ ಅಲ್ಲಿ ಕವಿ ಪತ್ನಿಯ ಜೀವನ ನಿಲುವುಗಳು ಹಣಕಿ ಹಾಕಿವೆ. ಅದಕ್ಕಾಗಿ ಅದನ್ನು ಬೇಂದ್ರೆ ಸಖ್ಯದ ಆಖ್ಯಾನ ಎಂದು ಕರೆದಿದ್ದಾರೆ. 'ಸಖಿಗೀತ' ಕವಿ ಹಾಗೂ ಕವಿಪತ್ನಿಯ ದಾಂಪತ್ಯದ ಕಟುಮಧುರ ವ್ಯಾಖ್ಯಾನವಾದರೆ ಅವರ 'ಬಾಲ್ಯಕಾಂಡ' ಬೇಂದ್ರೆಯವರ ಬಾಳಿನ ವೃತ್ತಾಂತ. ಅಲ್ಲಿನಂತೆ ಈ ಕಾವ್ಯದಲ್ಲು ಸಖಿಯೇ ಶ್ರೋತೃ, ಅವಳನ್ನು ಉದ್ದೇಶಿಸಿಯೆ ಕಾವ್ಯವನ್ನು ಹೇಳಲಾಗಿದೆ. ತಮ್ಮ ಆತ್ಮ ವೃತ್ತಾಂತವನ್ನು ಕಾವ್ಯ ಕಲೆಯಲ್ಲಿ ಮೂಡಿಸುವ ಉದ್ದೇಶವೆ ಈ ಎರಡು ಕಾವ್ಯಗಳ ರಚನೆಯ ಹಿಂದಿರುವುದು ಸ್ಪಷ್ಟ. 'ಸಖಿಗೀತ' ದಲ್ಲಿ ಅದು ಹೀಗೆ ಮೂಡಿ ಬಂದಿದೆ.

"ಇರುಳು–ತಾರೆಗಳಂತೆ ಬೆಳಕೊಂದು ಮಿನುಗುವುದು
ಕಳೆದ ದುಃಖಗಳಲ್ಲಿ ನೆನೆದಂತೆಯೆ
ಪಟ್ಟ ಪಾಡೆಲ್ಲವೂ ಹುಟ್ಟು–ಹಾಡಾಗುತ
ಹೊಸವಾಗಿ ರಸವಾಗಿ ಹರಿಯುತಿವೆ" [1]

ಎಂದು ಹೇಳಿರುವ ಕವಿ ಬೇಂದ್ರೆ 'ಬಾಲ್ಯಕಾಂಡ'ದಲ್ಲಿ

"ಸಖಿ, ನನ್ನ ಬಾಲ್ಯದಾ ss ಕಥೆ ನಿನಗೆ ಹೇಳುವೆನು ವ್ಯಥೆಯಿಲ್ಲ,
ಈಗೆಲ್ಲ ಹೂವಾಗಿದೆಬಸಿರು
ಬಸಿರುಬೇನೆಯ ಕಳೆದು, ಬೇರೆ ರೂಪವ ತಳೆದು, ಮುದ್ದೆ
ಮೂರ್ತತೆಗೊಂಡು ಕೂಸಾಗಿದೆ" [2]

J£ÀÄßvÁÛgÉ.

ಈ ಕಾರಣಗಳಿಂದ 'ಸಖಿಗೀತ'ದ ಎತ್ತರಬಿತ್ತರಗಳು ಈ ಕಾವ್ಯಕ್ಕೆ ದಕ್ಕಿಲ್ಲವೆನಿಸುತ್ತದೆ. ಸಖಿಗೀತದ ಓದಿನೊಡನೆ ಇದನ್ನು ಅಕ್ಕ–ಪಕ್ಕದಲ್ಲಿಟ್ಟು ನೋಡಿದಾಗ ಹೀಗೆನ್ನಿಸುವುದು ದಿಟವಾದರು 'ಬಾಲ್ಯಕಾಂಡ'ವನ್ನು ಅದರ ಸಖಿಗೀತದ ಪ್ರಭಾವದಿಂದ ಹೊರಗಿಟ್ಟು ಸ್ವತಂತ್ರವಾಗಿ ನೋಡಿದರೆ ಈ ಕಾವ್ಯದ ಸೊಗಸು ಅಷ್ಟೇನು ಕಡಿಮೆ ಸ್ಥರದ್ದಲ್ಲ ಎನಿಸುತ್ತದೆ. 456 ಸಾಲುಗಳ ಈ ಖಂಡಕಾವ್ಯದಲ್ಲಿ 1896 ರಿಂದ 1919ರವರೆಗಿನ ಬೇಂದ್ರೆಯವರ ಜೀವನದ ಸ್ಮೃತಿ ಚಿತ್ರಗಳು ಮೈದಳೆದಿವೆ. ಈ ಕಾಲಾವಧಿ ಕವಿಯ ಬಾಲ್ಯ ಮತ್ತು ತಾರುಣ್ಯಾವಸ್ಥೆಯ ಸ್ಮೃತಿ, ಚಲನ, ವಲನ, ಚಿತ್ರಮಾಲೆ ಇಲ್ಲಿ ಒಡಮೂಡಿದೆ. ಈ ಕಾವ್ಯದಲ್ಲಿ ನಿರೂಪಿತವಾದ ವಿವರಗಳಿಗು ಮತ್ತು ಕವಿ ಜೀವನದ ಘಟನೆಗಳಿಗು ಇರುವ ಸಂಬಂಧವನ್ನು ಈ ಕೆಳಗಿನ ಸಂಗತಿಗಳು ಪುಷ್ಟೀಕರಿಸುತ್ತವೆ. ಅವುಗಳನ್ನು ಹೀಗೆ ಪಟ್ಟಿ ಮಾಡಿ ನೀಡಲಾಗಿದೆ.

1. “1896, 31ನೇ ಜನವರಿ ಮಾಘವದ್ಯ ಪ್ರತಿಪದ ಗುರು ಪ್ರತಿಪದ ಮನ್ಮಥನಾಮ ಸಂವತ್ಸರದಂದು ಧಾರವಾಡದ ಪೋತನಿಸರ ಓಣಿಯ ಗುಣಾರಿಯವರ ಬಾಡಿಗೆ ಮನೆಯಲ್ಲಿ ಬೇಂದ್ರೆಯವರ ಜನನ.
2. 1907ರಲ್ಲಿ ತಂದೆ ರಾಮಚಂದ್ರರು ಗಂಡಮಾಲಿ ರೋಗದಿಂದ ತೀರಿಕೊಂಡದ್ದು, ಆಗ ಬೇಂದ್ರೆಯವರಿಗೆ 12 ವಯಸ್ಸು.
3. ತಂದೆಯ ಮರಣದ ನಂತರ ದತ್ತಾತ್ರೆಯ ಮತ್ತು ಕೃಷ್ಣ (ಬೇಂದ್ರೆಯವರ ಸಹೋದರ) ಹಾಗೂ ತಾಯಿ ಅಂಬವ್ವ ಅಜ್ಜಿ ಗೋಧುಬಾಯಿ ಆಶ್ರಯದಲ್ಲಿ ಧಾರವಾಡದಲ್ಲಿ ಇದ್ದದ್ದು.
4. 1913 ರಲ್ಲಿ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿದ್ದು ಮತ್ತು ಅಜ್ಜಿ ಗೋಧುಬಾಯಿಯ ಮರಣ.
5. 1914-18 ಕಾಲೇಜು ವಿದ್ಯಾಭ್ಯಾಸಕ್ಕಾಗಿ ಕಕ್ಕ ಬಂಡೂಪಂತರ ಆಶ್ರಯದಲ್ಲಿ ಪೂನಾವಾಸ
6. 1918ರಲ್ಲಿ ಫರ್ಗ್ಯೂಸನ್ ಕಾಲೇಜಿನಿಂದ ಬಿ.ಎ. ಪದವಿಯನ್ನು ಪಡೆದದ್ದು.
7. 1915ರಲ್ಲಿ ಗೆಳೆಯರೊಂದಿಗೆ ಸೇರಿ ‘ಶಾರದಾ ಮಂಡಲ’ದ ಸ್ಥಾಪನೆ
8. 1917ರಲ್ಲಿ ನರಗುಂದದ ಲಕ್ಷ್ಮೀಭಾಯಿಯವರ ವಧುಪರೀಕ್ಷೆ
9. 1918ರಲ್ಲಿ ಬೇಂದ್ರೆ ಮರಳಿ ಧಾರವಾಡಕ್ಕೆ ಬಂದದ್ದು, ಅದೇ ವರ್ಷ ಜರುಗಿದ ಸಾಹಿತ್ಯ ಸಮ್ಮೇಳನದಲ್ಲಿ ‘ಕೋಗಿಲೆ’ ಎಂಬ ಕವಿತೆ ವಾಚನ ಮಾಡಿದ್ದು.
10. 1919ರಲ್ಲಿ ಧಾರವಾಡದ ವಿಕ್ಟೋರಿಯಾ ಹೈಸ್ಕೂಲ್‌ನಲ್ಲಿ ಶಿಕ್ಷಕ ವೃತ್ತಿ ಆರಂಭಿಸಿದ್ದು.”[4] ಇವುಗಳಲ್ಲದೆ ಎನ್.ಕೆ.ಯವರು ಗುರುತಿಸಿರುವಂತೆ

   1. “ಬೇಂದ್ರೆಯವರ ಮೊದಲ ಕನ್ನಡ ಕವಿತೆ ‘ಪ್ರಭಾತ’ ಎಂಬ ಕಾವ್ಯ ಮಾಸಿಕದಲ್ಲಿ 1918ರ ಅಗಸ್ಟ್ ತಿಂಗಳಿನಲ್ಲಿ ಪ್ರಕಟವಾಯಿತು.
   2. 1916ರ ಸುಮಾರಿನಲ್ಲಿ ಬೇಂದ್ರೆ ಇಂಗ್ಲೀಷ್ ಹಾಗೂ ಮರಾಠಿಯಲ್ಲಿ ಕೆಲವು ಕವಿತೆಗಳನ್ನು ಬರೆದಿದ್ದರು.” [5]

ಈ ಘಟನೆಗಳು ಕವಿಯ ಅಂತರಂಗದ ಮೇಲೆ ಬೀರಿದ ಪರಿಣಾಮಗಳು. ಅವರ ಭಾವಕೋಶವನ್ನು ತಟ್ಟಿ ಅದರಿಂದ ಸಿದ್ಧವಾದ ಕಾವ್ಯ ವ್ಯಕ್ತಿತ್ವವೆ ಈ ಖಂಡಕಾವ್ಯದ ವಸ್ತುವಾಗಿವೆ. ಕಾವ್ಯ ನಾಯಕನ ಜನನ, ಬಾಲ್ಯದ ಆಟ, ಪಾಟಗಳು, ಧಾರವಾಡದ ಪರಿಸರ ಹಾಗೂ ಬೇಂದ್ರೆಯವರ ಸಾಹಿತ್ಯಾಭಿರುಚಿಗಳು ಈ ಖಂಡಕಾವ್ಯದಲ್ಲಿ ವಿಶದವಾಗಿ ನಿರೂಪಿಸಲ್ಪಟ್ಟಿವೆ. ‘ಬಾಲ್ಯದ ಎಲ್ಲ ನೆನಪುಗಳು ಇಲ್ಲಿ ಬಂದಿಲ್ಲ’ [6] ಎಂಬ ಕವಿ ಮಾತಿನಂತೆ ಇಲ್ಲಿ ಬಂದಿರುವ ಆತ್ಮವೃತ್ತಾಂತ ಸಮಗ್ರವಾದುದೇನು ಅಲ್ಲ. ಕವಿಯ ಬಾಳನ್ನು ಗಾಢವಾಗಿ ತಟ್ಟಿದ ಕೆಲವು ವ್ಯಕ್ತಿಗಳ, ತತ್ವಗಳ, ಪ್ರೇರಣೆಗಳ ಒಂದು ಸಿಂಹಾವಲೋಕನವಿದು. 24 ಸಾಲಿಗೆ ಒಂದು ಸ್ಮೃತಿ ಚಿತ್ರದಂತೆ ಒಟ್ಟು 19 ಸ್ಮೃತಿಚಿತ್ರಗಳು ಇಲ್ಲಿದ್ದು, ಬೇಂದ್ರೆಯವರ ತಾಯಿ, ಅಜ್ಜಿ, ತಂದೆ, ಬಾಲ್ಯ, ಆಟ–ಪಾಠ; ಪ್ಲೇಗ್‌ನ ದಿನಮಾನ, ವಿನೋದ, ಗೆಳೆತನ, ಹಬ್ಬ, ಧಾರವಾಡದ ವಾಸ, ತಾಯಿ ಕವಿಯ ಕವನಗಳನ್ನು ಮೆಚ್ಚುವುದು, ಕವಿಯ ಸಾಹಿತ್ಯ ಪ್ರೀತಿ ಈ ಸಂಬಂಧವಾಗಿ ಮೂಡಿದ ಸ್ಮೃತಿಗಳು ಇಲ್ಲಿ ಚಿತ್ರಿತವಾಗಿವೆ. ಈ ಚಿತ್ರಗಳು ಬಿಡಿ–ಬಿಡಿಯಾಗಿದ್ದು ಅವುಗಳ ನಡುವೆ ಸಾತತ್ಯ ಸಂಬಂಧವನ್ನು ಕಲ್ಪಿಸುವ ಕಲಾತ್ಮಕ ಜೋಡಣೆ ಇಲ್ಲದಿದ್ದರು ಕಾಲದ ಕ್ರಮಗತಿಯೆ ಅವುಗಳಿಗೆ ಏಕಸೂತ್ರತೆಯನ್ನು ಒದಗಿಸಿದೆ. ಕವಿ ಲೋಕ ವ್ಯಕ್ತಿಯಾಗಿ ಅನುಭವಿಸಿದ ತಾಪ, ವ್ಯಥೆ, ಬಡತನ, ಜೀವನದ ಸಿಹಿ–ಕಹಿ ನೆನಪುಗಳು ಕಾವ್ಯವಾಗಬೇಕೆಂಬುದೆ ಈ ಕಾವ್ಯ ರಚನೆಗೆ ಪ್ರೇರಣೆ. ಹೀಗೆ ಈ ಅವಳಿ ಕಾವ್ಯಗಳು ರೂಪದ ದೃಷ್ಟಿಯಿಂದ ಅನೇಕ ಸಾಮ್ಯತೆಗಳನ್ನು ಪಡೆದಿದ್ದರು ಅವುಗಳ ಆಂತರ್ಯದೊಳಗಿನ ಸತ್ವಶಕ್ತಿಗಳು ಒಂದೆ ಮಟ್ಟದವಾಗಿಲ್ಲ. ಕಲಾನೈಪುಣ್ಯ ಒಂದೆ ಎತ್ತರದ್ದಾಗಿಲ್ಲ. ಅವರ ಸಖಿಗೀತ ರಚನೆಯಾದುದು ೧೯೩೭ರಲ್ಲಿ ಆಗ ಬೇಂದ್ರೆಯವರ ಸೃಜನಶೀಲತೆ ಸಿದ್ಧಿಯ ಶಿಖರವನ್ನು ಮುಟ್ಟಿತ್ತು. ಅಂತಲೆ ಸಖಿಗೀತ ಭಾವ, ನಾದ, ಲಯ, ಪ್ರತಿಮಾ ನಿರ್ಮಾಣ ಸಾಮರ್ಥ್ಯ, ರೂಪಕ ಶಕ್ತಿಯಂತಹ ಕಲೆಯ ಎಲ್ಲ ವ್ಯಂಜನಗಳನ್ನು ಬಳಸಿಕೊಂಡು ಅವರ ಆತ್ಮಚರಿತ್ರೆ ಕಾವ್ಯದ ಸಿದ್ಧಿಯನ್ನು ಪಡೆಯಿತು. ಅವರ ‘ಬಾಲ್ಯಕಾಂಡ’ ಪ್ರಕಟವಾದದ್ದು ೧೯೭೩ರಲ್ಲಿ ಆ ಕಾಲಘಟ್ಟ ಕವಿಯ ಕಾವ್ಯ ಪ್ರತಿಭೆಯ ಇಳಿಗಾಲವೆನ್ನಬೇಕು. ಸಂಖ್ಯೆಯ ಸರ್ಕಸ್ಸು ಅತಿಯಾಗಿ, ಅರ್ಥದ ಗೂಢತೆ, ಸಂಸ್ಕೃತದ ಭೂಇಷ್ಟತೆ ಅಧಿಕಗೊಂಡು ಕಾವ್ಯ ಒಗಟುಒಗಟಾಯಿತು. ಇದನ್ನು ಅನೇಕ ವಿದ್ವಾಂಸರು ಗುರುತಿಸಿಯೂ ಇದ್ದಾರೆ.[3] ಅವರ ಈಚಿನ ಕವಿತೆಗಳಲ್ಲಿ ಸಂಖ್ಯೆಯ ಸರ್ಕಸ್ ಅತಿಯಾಗಿ ವಿಕರ್ಷಣೆಗೆ ಎಡೆ ದೊರೆತಿರುವುದು ಉಂಟು ಅವರು ನೀಡಿರುವ ವ್ಯಾಖ್ಯಾನಗಳ ನಿಚ್ಚಣಿಕೆಯು ನೆರವಾಗದೆ ಕಾವ್ಯಾನಂದಕ್ಕೆ ಎರವಾಗುವುದು ಉಂಟು.

ಬೇಂದ್ರೆಯವರ ಈ ಖಂಡಕಾವ್ಯದ ಅಭ್ಯಾಸ ಅವರ ಇಡೀ ಸಾಹಿತ್ಯ ಅಭ್ಯಾಸಕ್ಕೆ ಕಿಟಕಿಯೊ ಬೆಳಕಿಂಡಿಯೊ ಆಗಿ ಮಹತ್ವಪೂರ್ಣವಾಗುತ್ತದೆ. ಬೇಂದ್ರೆಯವರ ಕಾವ್ಯಸೃಷ್ಟಿಗೆ ಹಿನ್ನಲೆಯಾದ ಧಾರವಾಡದ ಸಾಂಸ್ಕೃತಿಕ ಪರಿಸರ, ಅವರ ಕಾವ್ಯರಚನೆಯ ಮೇಲೆ ಉಂಟಾದ ಪ್ರೇರಣೆ–ಪ್ರಭಾವಗಳು ಮತ್ತು ಅವರ ಕಾವ್ಯ ಸಂವೇದನೆಯು ರೂಪಗೊಳ್ಳುವುದಕ್ಕೆ ಹಿನ್ನೆಲೆಯಾದ ತತ್ವಗಳು, ವ್ಯಕ್ತಿಗಳು, ಕೃತಿಗಳು ಇವುಗಳನ್ನು ಕವಿಯೆ ಈ ಕಾವ್ಯದ ಮೂಲಕ ಪ್ರಮಾಣೀಕರಿಸಿದ್ದಾರೆ. 19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಆದಿಯು ಸಂಧಿಸುವ ಸಂಧಿ ಕಾಲದಲ್ಲಿ ಬೇಂದ್ರೆಯವರು ಜನಿಸಿದರು. ಆಗ ಧಾರವಾಡದಲ್ಲಿ 'ಪ್ಲೇಗ್' ಮನೆ ಮನೆಯ ಮಾತಾಗಿತ್ತು. ಸೃಷ್ಟಿಯ ರಹಸ್ಯವನ್ನು ಭೇದಿಸುವ 'ರೇಡಿಯಂ' ಶೋಧನೆಯಾಗಿತ್ತು .ರಾಷ್ಟ್ರೀಯ ಚಳುವಳಿ ಕುಂಟುತ್ತ ಸಾಗಿತ್ತು. ವಿಕ್ಟೋರಿಯಾ ರಾಣಿಯ ರಾಜ್ಯದ ಕನಸು ಹರಿದಿತ್ತು. ಸ್ವರಾಜ್ಯ ಚಳುವಳಿಯ ಬೀಜ ಮೊಳೆತಿತ್ತು. ಇಂತಹ ಸಂಕ್ರಮಣ ಸಂದರ್ಭದಲ್ಲಿ ಅಂಬಿಕೆಯೆಂಬುವಳ ಹೃದಯಾಂಬರದಿಂದ ತನ್ನ ಜನನವಾಯಿತೆಂದು ಕವಿ ಹೇಳಿಕೊಳ್ಳುತ್ತಾರೆ. ಇಲ್ಲಿಂದ ಆರಂಭವಾಗುವ ಕಾವ್ಯ ಕವಿಯ ತಾರುಣ್ಯದವರೆಗಿನ ಅನುಭವಗಳಿಗೆ ಮಾಧ್ಯಮವಾಗುತ್ತದೆ. ಬೆಳೆಯುತ್ತಿದ್ದ ಮಗುವಿಗೆ ಮನೆಯಲ್ಲಿ ತಾಯಿಯ ಬಾಯಿಯಿಂದ ಹೊರಸೂಸುತ್ತಿದ್ದ ಉದಯರಾಗದ ಭಕ್ತಿಗೀತೆಗಳು, ಸಂಪ್ರದಾಯದ ಹಾಡುಗಳು, ಪುರಾಣದ ಕಥೆಗಳು, ದಾಸರ ಪದಗಳು, ಮರಾಠಿ ಸಂತರ ವಚನಗಳು, ಅಭಂಗಗಳು, ಅಂಬಿಕಾತನಯದತ್ತರ ಚಿಂತನವನ್ನು ಬೆಳಗಿಸಿದವು. ಅವರ ಹೃದಯ ಸಂವೇದನೆಯನ್ನು ಹಿಗ್ಗಿಸಿದವು. ಅವುಗಳ ಪರಿಪಾಕವು ಕವಿ ಬೇಂದೆಯಿಂದ ಮೂಡಿ ಬಂದವು.

"ಹೆಣ್ಣು ಎನ್ನುವ ಮಾತು ತಾಯಿ ಎನ್ನುವ ಮಾತು
ಎರಡಲ್ಲ ಒಂದೆಂದು ತಿಳಿಸಿದಳು.
ಆ ಬಸಿರೆ ಬ್ರಹ್ಮಾಂಡ, ಹೆಸರಿಗೆ ಪಿಂಡಾಂಡ,
ಕುಸುರೀಗೆ ಬೆಲೆ ಎಂದು ಕಲಿಸಿದಳು"[7]

ತಾಯಿಯಿಂದ ಉಂಟಾದ ಈ ಪ್ರಭಾವ ಬೇಂದ್ರೆಯವರ ಕಾವ್ಯದಲ್ಲಿ ನಿಯತವಾಗಿರುವ ಮಾತೃತತ್ವದ ಉಪಾಸನೆಗೆ ಕಾರಣವಾಯಿತು ಎನ್ನಬೇಕು. ಬೇಂದ್ರೆಯವರ ಅಜ್ಜಿ ಗೋದುಬಾಯಿಯ ಸಂರಕ್ಷಣೆಯಲ್ಲಿ ಧಾರವಾಡದಲ್ಲಿಯೆ ಬೆಳೆಯಬೇಕಾಯಿತು. ಅವರ ಅಜ್ಜಿ ಹದಿನೇಳು ಹಡೆದವಳು ಅದರಲ್ಲಿ 16 ಹೆಣ್ಣುಮಕ್ಕಳು ಉಳಿದವರೆಲ್ಲ ತೀರಿಹೋಗಿ 17 ಮಕ್ಕಳಲ್ಲಿ ಕವಿಯ ತಾಯಿ ಮಾತ್ರ ಉಳಿದಳು. ಆ ಅಂಬಿಕೆಯ ಹೊಟ್ಟೆಯಲ್ಲಾದರು ಒಂದು ಗಂಡು ಮಗನನ್ನು ಕಂಡು ಆತನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂಬುದು ಅಜ್ಜಿಯ ಹಿರಿಯಾಸೆಯಾಗಿತ್ತು. ಅದಕ್ಕಾಗಿ ಅವಳು ಧಾರವಾಡದ ಕಾಮನಕಟ್ಟೆಯಲ್ಲಿ ಖಾನಾವಳಿ ನಡೆಸಿ ಕುಟುಂಬ ರಕ್ಷಕಳಾದಳು. ಅಜ್ಜಿ ಗೋದುಬಾಯಿಯ ಸಂರಕ್ಷಣೆಯಲ್ಲಿ ಬೆಳೆದ ಕವಿ ಆಕೆಯ ಪುರುಷಾರ್ಥಕೆತ್ತಿದ ಮೂರ್ತಿಯೆ ಆಗಿದ್ದರು. ಅವಳ ಬಗೆಗಿನ ಅಭಿಮಾನ ಕೃತಜ್ಞತೆಗಳನ್ನು ಕವಿ ಇಲ್ಲಿ ಹೀಗೆ ತೋಡಿಕೊಂಡಿದ್ದಾರೆ.

"ಆಕೆಯ ತಾಯಿಯು ಸ್ತ್ರೀಮಾತ್ರ ಛಾಯೆಯು
ಪುರುಷಾರ್ಥಕೆತ್ತಿದ ಮೂರ್ತಿಯದು.
ಗೊನೆಮೂಗ ಧೀರವೊ ನೋಟದ ನೇರವೊ
ಮಾತಿನ ವೀರವು ಅನುಪಮವು."[8]

ಬೇಂದ್ರೆಯವರು 3ನೇ ಫಾರ್ಮಿನಲ್ಲಿ ಓದುತ್ತಿದ್ದಾಗ ತಂದೆಯನ್ನು ಕಳೆದುಕೊಂಡರು. ಗಂಡ ಮಾಲಿ ರೋಗದಿಂದ ಬಳಲುತ್ತಿದ್ದ ತಂದೆ ರಾಮಚಂದ್ರರ ಸಾವು ಇಡೀ ಕುಟುಂಬದ ಆತ್ಮಶಕ್ತಿಯನ್ನೆ ನಡುಗಿಸಿತು. ಈ ಹಿಂಚುಮುಂಚಿನ ಅವಧಿಯಲ್ಲಿಯೆ ಚಿದಂಬರ ಮತ್ತು ರಾಘು ಎಂಬ ಇಬ್ಬರು ಕಿರಿಯ ಸಹೋದರರನ್ನು ಕವಿ ಕಳೆದುಕೊಂಡಿದ್ದರು. ಮೆಟ್ರಿಕ್ಯೂಲೇಷನ್ ಮುಗಿಯುತ್ತಿದ್ದಂತೆ ಅಜ್ಜಿ ಗೋದುಬಾಯಿಯು ಕಾಲವಾದಳು. ಹೀಗಾಗಿ ಸಾವು ಕವಿಯ ಎಳೆಯ ಮನಸ್ಸಿನಲ್ಲಿ ಅಳಿಸಲಾಗದ ಕೆಲವು ಪ್ರಶ್ನೆಗಳನ್ನು ಮೂಡಿಸಿಬಿಟ್ಟಿತು. ಒಂದಾದ ಮೇಲೊಂದು ಸಂಭವಿಸಿದ ಈ ಸಾವುಗಳು ಅವರ ಬಾಲ್ಯದಲ್ಲಿ ಮಾತ್ರವಲ್ಲ ಅವರ ಯೌವ್ವನದಲ್ಲು ಮರುಕಳಿಸಿದವು. ಹಾಗಾಗಿ ಸಾವು ಅವರ ಮುಂದಿನ ಕಾವ್ಯ ಚಿಂತನೆಯ ಒಂದು ಸಂವೇದನೆಯಾಗಿ ಅನೇಕ ಕವಿತೆಗಳಲ್ಲಿ ನಿಂತುಬಿಟ್ಟಿದೆ. ಅವರು ಬಾಲ್ಯದಲ್ಲಿದ್ದಾಗ ನಡೆದ ಒಂದು ಘಟನೆ ಈ ಕಾವ್ಯದಲ್ಲಿ ಉಲ್ಲೇಖಿತವಾಗಿದೆ. ಜೀವನರಂಗದ ನಾಟಕವನ್ನು ಮುಗಿಸಿ ಪಿತೃಭೂಮಿಗೆ ನಿಷ್ಕ್ರಮಿಸುತ್ತಿದ್ದ ಒಂದು ಜಾತಿಯ ಹೆಣವನ್ನು ಕಂಡು ಕವಿಯ ಮನಸ್ಸಿನಲ್ಲಿ ಹಲವು ಪ್ರಶ್ನೆಗಳು ಏಳುತ್ತವೆ. ಹೆಣಕ್ಕು ಜಾತಿಯುಂಟೆ? ಮೆರವಣಿಗೆ ಸಡಗರವುಂಟೇ? ಇವು ಯಾಕಾಗಿ ಎಂಬ ಜಿಜ್ಞಾಸೆ ಮೂಡುತ್ತದೆ.

"ಸಿರಿವಂತ ಇದ್ದರು, ಸಿರಿವಂತ ಸತ್ತರು
ಸಿರಿವಂತ ಅತ್ತರು, ಅದು ಭೂಷಣಾ
ಇದ್ದರೆ ಕಲ್ಯಾಣ, ಸತ್ತರೆ ಕೈಲಾಸ
ಅತ್ತರೆ ಭಜನೆಯ ಶಿವಘೋಷಣಾ."[9]

ಎಂಬ ತಿಳುವಳಿಕೆ ಮೂಡಿ ಬಣ್ಣಬಣ್ಣದ ಸಂತೆಯ ಬದುಕಿನ ಈ ಮೆರವಣಿಗೆ ಕಂಡು ಕವಿ ಏಕಾಂತದತ್ತ ಸರಿಯುತ್ತಾರೆ. ಹೀಗೆ ಬಾಲ್ಯದ ಈ ಅನುಭವವೆ ಗಾಢವಾಗಿ ಸಾವಿನ ಮಿಮಾಂಸೆ ಹಲವು ಪದರುಗಳಲ್ಲಿ ಅವರ ಕಾವ್ಯಗಳಲ್ಲಿ ವರ್ಣಿತವಾಗಿದೆ. ಹಸಿವು, ಬಡತನ, ಮಕ್ಕಳ ಸಾವು–ನೋವು, ನಿರುದ್ಯೋಗ ಇಂತಹ ಜೀವನದ ಧಾರುಣ ಸವಾಲುಗಳು ಅವರ ಬಾಲ್ಯದಲ್ಲಿಯೆ ಹಣುಕಿ ಹಾಕಿದ್ದವು. ಅವುಗಳೆ ಮುಂದೆ ಅಂಬಿಕಾತನಯರ ಕಾವ್ಯ ಯಜ್ಞದಲ್ಲಿ ನೋವು ನೊಂಪಿಯಾಗಿ, ತಾಪ ತಪವಾಗಿ, ಸಾವು ಸಾಕ್ಷಾತ್ಕಾರದ ಮಾರ್ಗವಾಗಿ ಕಂಡವು. ಆ ನೋವು ತಾಪಗಳಲ್ಲಿ ಬೆಂದ ಕವಿಗೆ ಅದರ ಪರಿಮಾರ್ಜನೆಗೆ ಕಾವ್ಯಸೃಷ್ಟಿಯು ಒಂದು ಮಾಧ್ಯಮವಾಗಿ ಪರಿಣಮಿಸಿತು.

1912-13ರವರೆಗಿನ ಧಾರವಾಡದ ಕಾಮನಕಟ್ಟೆಯ ವಾಸ್ತವ್ಯ ಹಾಗೂ ಅಲ್ಲಿನ ಆ ವಾತಾವರಣ ಬೇಂದ್ರೆಯವರನ್ನು ಕವಿಯನ್ನಾಗಿ ಮಾಡಿದವು. ಅವರ ಅಂತಃಪ್ರೇರಣೆಗಳನ್ನು ಜಾಗೃತಗೊಳಿಸಿದ್ದು ಈ ಕಾಮನಕಟ್ಟೆಯೆ.ಅಲ್ಲಿಯ ಬಾಲ್ಯಲೀಲೆಗಳನ್ನು ಕವಿ ಇಲ್ಲಿ ವಿಸ್ತಾರವಾಗಿಯೆ ಬಣ್ಣಿಸಿದ್ದಾರೆ.

"ಕಾಮನಕಟ್ಟೆಯ ವಾಮನಮೂರ್ತಿ ತ್ರಿ–
ವಿಕ್ರಮ ಲೀಲೆಯ ಏನೆಂಬೆನು?
ನೆನಸಿದ ಹಾಗೆಯೆ ಕನಸಿನ ನೆಲೆಯೇರಿ
ಬೆಲೆ ಬಂತು ನೆನಪಿನ ಪೇಟಿಯಲು
ಭವದ ಬೆನ್ನಲಿ ಅನುಭವ ಬಂತು, ಅನುಭಾವ
ಭಾವದ ತಳಿಯಲ್ಲಿ ಮೈದೋರಿತು.
ಸಹಾನುಭೂತಿಗೆ ಸ್ವಾನುಭೂತಿಯು ಕೂಡಿ
ಉದ್ಭವ ವಿಭೂತಿಯು ಒಡಮೂಡಿತು"[10]

ಆರು ವರ್ಷದಿಂದ ಮೊದಲಾದ ಆ ಬಾಲ್ಯದ ಹುಡುಗಾಟ ಆಟ ಪಾಟಗಳೇನು. ಮೋಜೇನು. ಅವೆಲ್ಲ ಕವಿಯ ಮನಸ್ಸನ್ನು ವಿಕಸನಗೊಳಿಸಿದವು. ಹುಣಸಿ ಬಿಂಗರಿ ಆಟ, ಗಾಳಿಪಟ ಏರಿಸುವ ಆಟ, ಗುಂಡು ಗಜಗದ ಆಟ, ಕುಂಟಲ್ಪಿ, ಚಾವಂಗ, ಹುಲಿ–ಹಳ್ಳು ಆಟ, ಕಣ್ಣ ಮುಚ್ಚಣಿಕೆ, ಚಿಣಿ–ಪಣಿ, ಚೆಂಡಾಟ, ಅಣರಂಟೆಮಾಟ, ಹೀಗೆ ಒಂದೊಂದು ಆಟದಲ್ಲಿ ದತ್ತುರಾಯರು ತಲ್ಲೀನರಾದರೆಂದರೆ ಶಾಲೆಯನ್ನೆ ಮರೆತು ಬಿಡುತ್ತಿದ್ದರಂತೆ. ಬುಗುರಿಯಾಟದಲ್ಲಿ ತಾವು ಪಡುತ್ತಿದ್ದ ಸಂಭ್ರಮವನ್ನು ನಮಗೆ ಪರಿಚಯಿಸುವುದು ಹೀಗೆ

"ಕೈ ಇಲ್ಲಾ, ಕಾಲೊಂದೆ, ಗೋಣಿಲ್ಲ, ತಲೆಯಷ್ಟೇ
ಟೊಂಕದ ಬಿಂಕವೆ, ಮೈ ದುಂಡಗೆ ।"[11]

ಇಂತಹ ಬಾಲ್ಯ ವಿನೋದಗಳು ಹೆಚ್ಚು–ಕಡಿಮೆ ಎಲ್ಲರ ಬಾಲ್ಯದ ಅನುಭವಗಳು ಆಗಿವೆ. ಮಾತ್ರವಲ್ಲ ಕವಿಯು ಎಲ್ಲರಂತೆ ಸಾಮಾನ್ಯವಾದ ಬಾಲ್ಯವನ್ನೆ ಅನುಭವಿಸಿದ್ದಾರೆ. ಆದರೆ ಆ ಬಾಲಮನದಲ್ಲಿ ಸಾಂತದಲ್ಲಿ ಅನಂತವನ್ನು ಕಾಣುವ ಹೆಬ್ಬಯಕೆಯೊಂದು ಗುಪ್ತಗಾಮಿನಿಯಾಗಿ ಅಡಗಿ ಕೂತಿತ್ತು. ಅದನ್ನು ಗಾಳಿಪಟ ಏರಿಸುವಾಟದ ಸಾಂಕೇತಿಕ ಪ್ರತಿಮೆಯ ಮೂಲಕ ಕವಿ ಚಿತ್ರಿಸುತ್ತಾರೆ.

ನೆಲದ ಮೇಲೆಯೆ ಕಾಲು ಊರಿ ನಿಂತಿದ್ದರು
ಬಾನಲ್ಲೇರುತ್ತಿತ್ತು ಚಿತ್ತಪಟಾ
ಧಾರದ ಖಂಡಿಕೆ ಮಣ್ಣಲ್ಲಿ ಉರುಳಿಯು
ಗಾಳಿಗೆ ಹಾರಿತ್ತು ಮುಗಿಲಮಟಾ"[12]

ಬೇಂದ್ರೆಯವರು ತಮ್ಮ ಕಾವ್ಯಭೂಮಿಕೆಯನ್ನು ಹದ ಮಾಡಿಕೊಳ್ಳುವುದಕ್ಕೆ ನೆರವಾದುದು ಧಾರವಾಡದ ಸಾಂಸ್ಕೃತಿಕ ಪರಿಸರ ಮತ್ತು ಪ್ರಾಕೃತಿಕ ಪರಿಸರಗಳು. ಧಾರವಾಡದ ಹಳ್ಳ–ಕೊಳ್ಳ ಕೆಲಗೇರಿಯ ರಮ್ಯ ಪ್ರಕೃತಿ, ಹಾಲಗೇರಿಯ ದತ್ತಾತ್ರೇಯನ ಗುಡಿ, ಕಾಮನ ಕಟ್ಟೆಯ ಹುಣಸಿ ಮರಗಳು, ಸೋಮೇಶ್ವರದ ಹಾದಿ–ಬೀದಿಗಳು ಬೇಂದ್ರೆಯವರ ಕಾವ್ಯಪ್ರಜ್ಞೆಯನ್ನು ವಿಕಸನಗೊಳಿಸಿದವು. ಗರತಿಯರ ಹಾಡುಗಳು, ದಾಸರ ಪದಗಳು, ಲಾವಣಿ, ಗೀಗಿ, ಚೌಡಿಕೆಯರ ಪದಗಳು ಕವಿಯ ಭಾವಕೋಶವನ್ನು ತುಂಬಿದವು. ಹೀಗಾಗಿ ಜಾನಪದ ಪ್ರಜ್ಞೆಯು ಅವರ ಕಾವ್ಯ ಸಂವೇದನೆಯ ಒಂದು ಪ್ರಧಾನ ಅಂಗವಾಯಿತು. "ಧಾರವಾಡದಲ್ಲಿ ಯಾವಾಗಲು ಕಿವಿದೆರೆದು ಓಡಾಡುವ ನನಗೆ ದಾಸರ ಪದದಿಂದ ಗೊಲ್ಲರ ಹಾಡಿನವರೆಗು ಎಲ್ಲವನ್ನು ಕೇಳಿ–ಕೇಳಿ ಒಂದು ಸಂಸ್ಕಾರ ಹುಟ್ಟಿರಬೇಕು"[13] "ನನ್ನದು ಜನಪದದ ಶೈಲಿ"[14] ಎಂಬ ಕವಿಯ ಮಾತುಗಳು ಇದನ್ನು ಪುಷ್ಟೀಕರಿಸುತ್ತವೆ. ಬತ್ತಿಸ ಪುತ್ಥಳಿಯ ಕಥೆ, ಬೀರಬಲ್ಲನ ಕಥೆ, ರಾಜರ ಕಥೆ, ಕಳ್ಳ–ಸುಳ್ಳರ ಕಥೆ, ನೀತಿಕಥೆ, ಡೊಳ್ಳಿನ ಕಥೆ, ಚೌಡಕಿ, ಗೊಂದಲಿಗರ ಹಾಡುಗಳು ಕವಿಯನ್ನು ತೀವ್ರವಾಗಿ ಆಕರ್ಷಿಸಿದ್ದವು.

"ಅವರಂತೆ ನಾನೆಂಬೆ, ನನ್ನಂತೆ ಅವರೆಂಬೆ
ಮೈದುಂಬಿದಂತಾಗೆ ನಾನಂಬೆನೇ?[15]

ಎಂದು ಉದ್ಗರಿಸುವ ಬೇಂದ್ರೆ ತಮ್ಮನ್ನು ಜಾನಪದ ಕವಿಯಾಗಿ ಪರಿಭಾವಿಸಿಕೊಳ್ಳುತ್ತಾರೆ. ಹೀಗೆ ಅವರ ಬಾಳಿನಲ್ಲಿ 'ನಾಗರ' ಮತ್ತು 'ಜಾನಪದ' ಸಂಸ್ಕೃತಿಗಳ ಸಂಗಮವು ಉಂಟಾಗಿ ವಿಸ್ಮಯದಾಯಕವಾಗಿ ಪರಿಣಮಿಸಿತು. ಬೇಂದ್ರೆಯವರು ಜಾನಪದದಿಂದ ಸ್ಫೂರ್ತಿ ಪಡೆದರು. ಪಡೆದದ್ದನ್ನು ಶಿಷ್ಟ ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿ ಶಿಷ್ಟಕ್ಕೆ ಜಾನಪದದ ದೀಕ್ಷೆ ಕೊಟ್ಟರು.

1914 ರಿಂದ 1918ರ ಅವಧಿಯಲ್ಲಿ ಬೇಂದ್ರೆಯವರು ತಮ್ಮ ಪದವಿ ವ್ಯಾಸಂಗಕ್ಕಾಗಿ ಪುಣೆಯ ಫರ್ಗ್ಯೂಸನ್ ಕಾಲೇಜು ಸೇರಿದರು. ಅದೇ ಊರಿನಲ್ಲಿದ್ದ ಕಕ್ಕನ ಮನೆಯಲ್ಲಿ ಆಶ್ರಯ ಪಡೆದಿದ್ದ ಅವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಕಡೆಗೆ ಮುಖ ಮಾಡಿದರು. ಅನೇಕ ಗೆಳೆಯರೊಂದಿಗೆ ಕೂಡಿ ಶಾರದಾ ಮಂಡಲವನ್ನು ಕಟ್ಟಿ ಪುಸ್ತಕ ಭಂಡಾರವೊಂದನ್ನು ಸ್ಥಾಪಿಸಿದರು. ಸಾಹಿತ್ಯದ ಓದಿನ ಹುಚ್ಚು ಅವರಲ್ಲಿ ಪ್ರಬಲವಾದುದು ಅಲ್ಲಿಯೆ. ಅವರ ಮನೆಮಾತು ಮರಾಠಿ. ಅವರು ಬೆಳೆದ ಪರಿಸರದ ಭಾಷೆ ಕನ್ನಡ. ವಿದ್ಯಾರ್ಜನೆಯಿಂದ ಲಭಿಸಿದ್ದು ಇಂಗ್ಲೀಷ ಸಂಪರ್ಕ. ಇದರಿಂದ ಆ ಮೂರು ಭಾಷಾ ಸಾಹಿತ್ಯಗಳ ಅಭ್ಯಾಸ ಅಲ್ಲಿ ಬಿರುಸಾಗಿ ನಡೆಯಿತು. ಆ ಸಾಹಿತ್ಯ ಧಾರೆಗಳು ಬೇಂದ್ರೆಯವರ ಕವಿ ಚೇತನವನ್ನು ರೂಪಿಸಿದವು. ಅದನ್ನು ಈ ಸಾಲುಗಳಲ್ಲಿ ನೋಡಬಹುದು.

"ಕನ್ನಡವು ಹಿಂದಾಗಿ ಇಂಗ್ಲೀಷು ಮುಂದಾಗಿ
ಮರಾಠಿ ಸಂಸ್ಕೃತ ಜತೆ ಬಂದವು
ಜಗನ್ನಾಥನ ಗಂಗೆ ಒಳಗೆ ಹರಿಯುತ್ತಿರಲು
ಆಂಗ್ಲವ ಕನ್ನಡಿಸಿ ಸ್ಫೂರ್ತಿ ತಂದವು."[16]

ಈ ಕವಿ ಕನ್ನಡದಲ್ಲಿ ಕಾವ್ಯರಚನೆ ಮಾಡುವ ಮೊದಲು ಮರಾಠಿ ಮತ್ತು ಇಂಗ್ಲಿಷ ಕವಿತೆಗಳ ರಚನೆಗೆ ಕೈಹಾಕಿದುದ್ದಕ್ಕೆ ಮೇಲಿನ ಪದ್ಯದಿಂದ ಸಾಕ್ಷ್ಯ ದೊರೆಯುತ್ತದೆ. ಬೇಂದ್ರೆಯವರು ಮಹಾಕವಿ ಅಂಬಿಕಾತನಯದತ್ತನಾಗಲು ಬೇಕಾಗುವ ಬೆಳಕು ಅವರಿಗೆ ಇಂಗ್ಲೀಷನಿಂದ ಮತ್ತು ಅದು ಮರಾಠಿ ಸಾಹಿತ್ಯದ ಬೆಳಕಿಂಡಿಯಿಂದ ದಕ್ಕಿತೆಂದು ತಿಳಿದುಬರುತ್ತದೆ. ಅಲ್ಲದೆ ಬೇಂದ್ರೆಯವರು ಮೊದಮೊದಲು ಸ್ವತಂತ್ರ ಕಾವ್ಯರಚನೆಗೆ ಕೈ ಹಾಕುವುದಕ್ಕು ಮುನ್ನ ಅನುವಾದ ಕಾರ್ಯಕ್ಕೆ ತೊಡಗಿಕೊಂಡ ಬಗ್ಗೆ ಸೂಚನೆಗಳು ದೊರಕುತ್ತವೆ. ಸಂಸ್ಕೃತದ ಕಾಳಿದಾಸ ಅವರ ಪ್ರಥಮ ಪ್ರೇಮಿ, ಪ್ರಥಮ ಗುರು. (ಅವನ 'ಮೇಘದೂತ'ವನ್ನು ಕನ್ನಡಿಸಿದ್ದಾರೆ) ಜಯದೇವನ 'ಗೀತಗೋವಿಂದ' ಜಗನ್ನಾಥ ಪಂಡಿತನ 'ಗಂಗಾಲಹರಿ' ಶಂಕರಾಚಾರ್ಯರ 'ಸೌಂದರ್ಯ ಲಹರಿ' ಯ ಭಾವ ವಿಲಾಸಗಳು ಬೇಂದ್ರೆಯವರಲ್ಲಿ ಅಮಲು ಹಿಡಿಸಿದವು. ಅವುಗಳಲ್ಲಿನ ಭಕ್ತಿ, ಭಾವನಿರ್ಭರತೆ, ಪದಲಾಲಿತ್ಯಗಳಿಗಾಗಿ ಬೇಂದ್ರೆಯವರು ಅವುಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಕಾಳಿದಾಸನ 'ಶಾಕುಂತಲಾ' ಭಟ್ಟನಾರಾಯಣನ 'ವೇಣಿಸಂಹಾರ' ಭವಭೂತಿಯ 'ಮಹಾವೀರ ಚರಿತ' ಈ ಸಂಸ್ಕೃತ ನಾಟಕಗಳು ಶಾಲಾ ರಂಗಭೂಮಿಯ ಮೇಲೆ ನಡೆದು ಕವಿಯ ಭಾವಕೋಶವನ್ನು ಆವರಿಸಿಬಿಟ್ಟಿದ್ದವು.

ಬೇಂದ್ರೆಯವರಿಗೆ ಪ್ರಿಯರಾದ ಇಂಗ್ಲೀಷ್ ಕವಿಗಳೆಂದರೆ 'ಕೀಟ್ಸ್' ಮತ್ತು ಎಮರ್ಸನ್'[17] ಕೀಟ್ಸ್‌ನ ಕಾವ್ಯವನ್ನು ಸದಾ ಬೇಂದ್ರೆಯವರು ತಮ್ಮ ಬಳಿಯಲ್ಲಿಯೆ ಇಟ್ಟುಕೊಂಡು ಓಡಾಡುತ್ತಿದ್ದರು ಎಂದು ಅವರ ಗೆಳೆಯರಾದ ಶ್ರೀಧರ ಕಾನೋಳಕರ್ ಉಲ್ಲೇಖಿಸುತ್ತಾರೆ. ಖಲೀಲಗಿಬ್ರಾನ,

ಜಾರ್ಜ್‌ರಸೆಲ್ (ಎ.ಇ), ಮಾರಿಸ್ ಮೆಟರ್‌ಲಿಂಕ್‌ರಂತಹ ಪಾಶ್ಚಾತ್ಯ ಇಂಗ್ಲೀಷ ಕವಿಗಳಲ್ಲದೆ ರವೀಂದ್ರನಾಥ ಠಾಕೂರ ಮತ್ತು ಅರವಿಂದರಂತಹ ಭಾರತೀಯ ಇಂಗ್ಲೀಷ ಕವಿಗಳ ಪ್ರಭಾವವು ಅಷ್ಟೇ ಗಾಢವಾಗಿತ್ತು. ರವೀಂದ್ರರ 'ಸಾಧನಾ', '*Cresent Moon*' ಗಳಂತಹ ಕೃತಿಗಳು ಬೇಂದ್ರೆಯವರ ಅಂತಃಪ್ರಜ್ಞೆಯನ್ನು ಆವರಿಸಿಬಿಟ್ಟಿದ್ದವು. '*Cresent Moon*' ಕಾವ್ಯ ಸಂಕಲನದದಲ್ಲಿರುವ ಶಿಶುಗೀತೆಗಳ ಮೋಹಕ ಶೈಲಿಯೆ ಬೇಂದ್ರೆಯವರಿಗೆ 'ಕರುಳಿನ ವಚನಗಳು' ಮತ್ತು 'ಉಯ್ಯಾಲೆ' ಕಾವ್ಯಗಳ ರಚನೆಗೆ ಪ್ರೇರಣೆ ಒದಗಿಸಿತು.

ಅರವಿಂದರ ಸಾಹಿತ್ಯ ಚಿಂತನೆ ಮತ್ತು ಆಧ್ಯಾತ್ಮ ಚಿಂತನೆಗಳಿಂದ ಬೇಂದ್ರೆಯವರ ಕಾವ್ಯ ದರ್ಶನವನ್ನು ಅರ್ಥ ಮಾಡಿಕೊಳ್ಳಬಹುದು. ಪುಣೆಯಲ್ಲಿದ್ದಾಗಲೆ ಅರವಿಂದರು ಹೊರಡಿಸುತ್ತಿದ್ದ 'ಆರ್ಯ' ಎಂಬ ಮಾಸಿಕ ಪತ್ರಿಕೆಯ ಪರಿಚಯವಾಯಿತು. ಮುಂದೆ 'Future Poetry' ಯನ್ನು ಓದಿದರು. ಅರವಿಂದರ ಶಬ್ದಗುಣ, ನಾದಗುಣ, ಭಾವಗುಣ, ಗೇಯಗುಣ, ಮತ್ತು ದರ್ಶನ ಪ್ರಜ್ಞೆಗಳು ಕವಿಯ ಮನಸ್ಸನ್ನು ಸೆಳೆದವು. ಮುಂದೆ ಆಗಲಿರುವ ಭಾವುಕ ಕವಿಯ ಲಕ್ಷಣಗಳು ಈ ಘಟ್ಟದಲ್ಲಿಯೆ ಮಿಂಚಿದವು. ಹೀಗೆ ಹತ್ತು ದಿಕ್ಕುಗಳಿಂದ ಬಂದ ಪ್ರಭಾವಗಳನ್ನು ಅರಗಿಸಿಕೊಂಡು ಅನನ್ಯ ಎನ್ನಬಹುದಾದ ಮೌಲಿಕತೆಯನ್ನು, ಸ್ವಂತಿಕೆಯನ್ನು ಮೆರೆಯುವ ಅಭೀಪ್ಸೆ ಮೊಳೆತು 1918ರಲ್ಲಿ ಧಾರವಾಡದ 'ಪ್ರಭಾಸ' ಮಾಸಪತ್ರಿಕೆಯಲ್ಲಿ ಅವರ ಮೊದಲ ಕನ್ನಡ ಕವಿತೆ 'ತುತ್ತೂರಿ' ಪ್ರಕಟವಾಯಿತು.'ಬಾಲ್ಯಕಾಂಡ' ಬೇಂದ್ರೆಯವರ ಬಾಳಿನ ಕಟು ವ್ಯಾಖ್ಯಾನವಲ್ಲ. ಅದು ಬಾಲ್ಯದ ನೆನಪುಗಳ ಚಿತ್ರಮಾಲೆ. ಈ ನೆನಪುಗಳು ಇಳಿವಯಸ್ಸಿನ ಪಕ್ವಬುದ್ಧಿಯ ಬೆಳಕಿನಲ್ಲಿ ಆವಿರ್ಭವಿಸಿರುವುದರಿಂದ ಅವುಗಳ ಸಾಚಾತನ ಪ್ರಶ್ನಾರ್ಹವಾಗುತ್ತದೆ.

1919ಕ್ಕೂ ಪೂರ್ವದ ಜೀವನದ ಘಟನೆಗಳನ್ನು 1950 ರ ಎಡ–ಬಲದಿಂದ ನೆನೆಯುತ್ತ 1963–64ರ ಹೊತ್ತಿಗೆ ಮೂಡಿಸುತ್ತಾರೆ. 1972ರಲ್ಲಿ ಕೆಲವು ಕಡೆ ತಿದ್ದುಪಡಿಗಳೊಡನೆ ಈ ಕಾವ್ಯ ಪ್ರಕಟವಾಗುತ್ತದೆ. ಹೀಗಾಗಿ ಈ ಕಾವ್ಯ ಕವಿಯ ಮನಸ್ಸಿನಲ್ಲಿ ಮೂಡಿ ಮೂರ್ತರೂಪ ಪಡೆದುಕೊಳ್ಳುವುದಕ್ಕೆ ಸವೆದಿರುವ ಕಾಲ ದೀರ್ಘವಾದ ಕಾರಣ ಕಾವ್ಯಾನುಭವ ಘನೀಕರಣಗೊಳ್ಳುವುದರಲ್ಲಿ ತೊಡಕಾಗಿದೆ. ಇದರಿಂದ ಕಲಾತ್ಮಕತೆ ಕೊಂಚಮಟ್ಟಿಗೆ ಸೊರಗಿದೆ. ಆದರೆ ಕವಿಗೊದಗಿದ ಕಾವ್ಯ ಪ್ರೇರಣೆಗಳ ಮತ್ತು ಕವಿಯ ಕಾವ್ಯ ಸಂವೇದನೆ ರೂಪುಗೊಳ್ಳುವುದಕ್ಕೆ ಹಿನ್ನಲೆಯಾದ ವ್ಯಕ್ತಿಗಳು, ತತ್ವಗಳು, ಪುಸ್ತಕಗಳು ಇಲ್ಲಿ ಚರ್ಚಿತವಾಗಿರುವುದರಿಂದ ಕವಿತೆಗೆ ತನ್ನದೆಯಾದ ಪ್ರಾಮುಖ್ಯತೆ ಇದೆ. ಕವಿ ಬೇಂದ್ರೆಯವರ ಕಾವ್ಯಪ್ರಜ್ಞೆಯು ಯಾವ–ಯಾವ ಎಡೆಗಳಿಂದ ನೀರು–ಗೊಬ್ಬರ ಪೋಷಕಾಂಶಗಳನ್ನು ಹೀರಿ ಬೆಳೆಯಿತೆಂಬುದನ್ನು ಗುರುತಿಸಲು ಅಗತ್ಯವಾದ ಸೂಚನೆಗಳನ್ನು ನೀಡಿದೆ.

**ಪರಾಮರ್ಶನ ಗ್ರಂಥಗಳು**


೧. ಅದೇ ಪುಟ ಸಂಖ್ಯೆ 12

೨. ಅದೇ ಪುಟ ಸಂಖ್ಯೆ–6 ಮತ್ತು 7

೩. ಅದೇ ಪುಟ ಸಂಖ್ಯೆ–8

೪. ಅದೇ ಪುಟ ಸಂಖ್ಯೆ–9

೫. ಸುಮತೀಂದ್ರ ನಾಡಿಗ– ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು ಪುಟ ಸಂಖ್ಯೆ–45

೬. ಅದೇ ಪುಟ–45

೭. ದ.ರಾ.ಬೇಂದ್ರೆ –ಮತ್ತೆ ಶ್ರಾವಣ ಬಂತು ಪುಟ ಸಂಖ್ಯೆ–19

೮. ಅದೇ ಪುಟ ಸಂಖ್ಯೆ 22

೯. ಸುಮತೀಂದ್ರ ನಾಡಿಗ –ಬೇಂದ್ರೆಯವರ ಕಾವ್ಯದಲ್ಲಿ ವಿಭಿನ್ನ ನೆಲೆಗಳು ಪುಟ ಸಂಖ್ಯೆ

೧೦. ದ.ರಾ.ಬೇಂದ್ರೆ –'ಮತ್ತೆ ಶ್ರಾವಣ ಬಂತು' ಪುಟ. ಸಂಖ್ಯೆ–೧೩